8. ಮಿ॥ ಇ. ಎಂ. ಪ್ಲೇಫೇರ್ ಸಾಹೇಬರ ಉರಸೆ ಎಸ್ಟೇಟಿನಲ್ಲಿ ಬಂದು ದೊಡ್ಡಿ ಸ್ಥಾಪಿಸಬೇಕಾಗಿ ತಿಪ್ಪಾರ್ಜು ಮಾಡಿದ 8—12—08ನೆ ಮಕ್ಕಂ ಮೂಡಿಗೆರೆ ಅಮಲ್ದಾರಿ 108ನೆ ರಿಪೋರ್ಟು ಓದಲಾಗಿ, ಸದರಿ ಎಸ್ಟೇಟಿನ 2 ಮೈಲಿ ಫಾಸಲೆಯೊಳಗೇನೆ 2 ದೊಡ್ಡಿಗಳು ಹಾಲಿ ಇರುವದರಿಂದ, ಸದರಿ ಉರಸೆ ಎಸ್ಟೇಟಿನಲ್ಲಿ ಮತ್ತೊಂದು ದೊಡ್ಡಿ ಸ್ಥಾಪಿಸುವದು ಅನವಶ್ಯಕವೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

9. ಕೊಪ್ಪ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸ್ಥಳ ಕೊಡುವ ವಿಚಾರದಲ್ಲಿ ಸೀನಿಯರ್ ಸರ್ಜ್ಜರವರ 6—10—08ನೆ ಮಕ್ಕಂ 251ನೆ ಲೆಟರ್ ಮಲಸ್ಪಾಫಿಸಿ ಬಂದ ಸೆಕ್ರಿಟರಿಯವರ 5—11—08ನೆ ಮಕ್ಕಂ 4207—ಮಡಿಕಲ್ 95-08-2ನೆ ಡಾಕೆಟ್ ಓದಲಾಯಿತು. ಮತ್ತು ಅದರಲ್ಲಿ ಉಕ್ತವಾಗುವ ಪ್ರಕಾರ ಕೊಪ್ಪ ಆಸ್ಪತ್ರೆ ಅಸಿಸ್ಟೆಂಟರಿಗೆ ವಾಸಕ್ಕೆ ಪ್ರತ್ಯೇಕ ಸ್ಥಳ ನಿಷ್ಕರ್ಷಿಸುವವರಿಗೆ ಹಾಲಿ ಇರತಕ್ಕ ಮುಸಾಫರ್ ಖಾನೆಯ ಬಂದು ಭಾಗವನ್ನು ಸರಿಯವರ ವಾಸಕ್ಕೆ ಕೊಡಬಹುದೆ ಎಂಬ ಅಂಕವನ್ನು ಸಹ ಬೋರ್ಡಿನಲ್ಲಿ ಚರ್ಚಿಸಲಾಗಿ, ಪ್ರಯಾಣೀಕರ ಉಪಯೋಗಕ್ಕೇನೆ ಏರ್ಪಾಡಾಗಿರುವ ಮುಸಾಫರ್‌ಖಾನೆಯನ್ನೇ ಆಗಲಿ ಅಥವಾ ಅದರ ಬಂದು ಭಾಗವನ್ನೇ ಆಗಲಿ ಆಸ್ಪತ್ರೆ ಅಸಿಸ್ಟೆಂಟರ ವಸತಿಗೆ ಕೊಡುವದರಿಂದ ಪ್ರಯಾಣೀಕರಿಗೆ ಕೇವಲ ಅನಾನುಕೂಲವಾಗುವ ಪ್ರಯುಕ್ತ ಆ ರೀತಿ ಮಾಡುವದು ಸೂಕ್ತವಲ್ಲವಾಗಿ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

10. ಈ ಕೆಳಗೆ ನಮೂದು ಮಾಡಿರುವ ಗವರ್ನಮೆಂಟ್ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಮೂರನೇ ಕ್ಲಾಸು ಬಂಗಲೆಗಳು ಮತ್ತು ಮುಸಾಫರ್‌ಖಾನೆಗಳ ಉಪಯೋಗಕ್ಕೆ ಪಾತ್ರೆಗಳು ವಗೈರೆ ಸಾಮಾನುಗಳನ್ನು 100 ರೂಪಾಯಿಗೆ ವಿಸಾರದಂತೆ ಕೊಂಡುಕೊಳ್ಳುವ ಅಧಿಕಾರವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಟ್ಟು ರುತ್ತಾಗಿ ನಮೂದಾಗುವ 30—11—08ನೆ ಮಕ್ಕಂ 5123-32—ಲೋ. ಬೋ. 377-07-4ನೆ ಗವರ್ನಮೆಂಟ್ ಆರ್ಡರು.

(2) ಅತಿಕೆ ಹಾಳತ ವಜಾ ಮಾಡಿದ್ದರಿಂದ ಉಂಟಾದ ಲುಕ್ಸಾನು ಬಗ್ಗೆ ಇತರ ವಿಧವಾದ ಉತ್ಪತ್ತಿಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಏರ್ಪಡಿಸಿಕೊಳ್ಳಬೇಕೆಂದು ನಮೂದಾಗುವ 19—12—08ನೆ ಮಕ್ಕಂ 5873-81—L. B. 176-08-2ನೆ ಗಾರ್ನ್‌ಮೆಂಟ್ ಆರ್ಡರು.

(3) ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಯೂನಿಯರ್ಜ ಎರಡು ಜನ ಝಾತವಾಲಿಗಳ ತಲಬಿಗೆ ಮಾಹೇಯಾನಾ ಬಂದು ರೂಪಾಯಿ ಹೆಚ್ಚು ಮಾಡಿರುತ್ತೆಂದು ನಮೂದಿರುವ 11—1—09ನೆ ಮಕ್ಕಂ 6465-6—L. B. 207 03—ನೆ ಗಾರ್ನ್‌ಮೆಂಟ್ ಪ್ರೊಸೀಡಿಂಗ್ಸ್.

(4) ಅವೃತ ಮಹಲ್ ಹೋರಿಗಳಿಗೆ ಹಾಕುವ ದರವನ್ನು ನಿಷ್ಕರ್ಷೆ ಮಾಡಿರುವ 16—1—09ನೆ ಮಕ್ಕಂ 6645-53—L. B. 170-07-13ನೆ ಗಾರ್ನ್‌ಮೆಂಟ್ ಪ್ರೊಸೀಡಿಂಗ್ಸ್.

(5) ಹರಿಹರಪುರದ ಆಸ್ಪತ್ರೆಯನ್ನು ಬಾಳೂರಿಗೆ ವರ್ಗಮಾಡಿ ಅಲ್ಲಿನ ಜನಗಳಿಗೆ ಅನಾನುಕೂಲ ಪಡಿಸುವದಕ್ಕಿಂತ ಬಾಳೂರಲ್ಲಿ ಪ್ರತ್ಯೇಕ ಕಟ್ಟಡ ನಿರ್ಮಾಣಾಗುವ ವರಿಗೂ ಹರಿಹರಪುರದ ಆಸ್ಪತ್ರೆ ವರ್ಗಾಯಿಸಬೇಕಾದ ಅವಶ್ಯಕತೆ ಇಲ್ಲವಾಗಿ ನಮೂದಾಗುವ 6—2—09ನೆ ಮಕ್ಕಂ 7387-8—L. B. 145-08-12ನೆ ಗಾರ್ನ್‌ಮೆಂಟ್ ಪ್ರೊಸೀಡಿಂಗ್ಸ್.

11. ತರೀಕೆರೆ ಆಸ್ಪತ್ರೆಗೆ ಬಂದು ಹೊಸ ಆಸ್ಪತ್ರೆ ಕಟ್ಟುವ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ಪಡೆದು ರಿಪೋರ್ಟು ಮಾಡಬೇಕೆಂತ ಕೇಳಿರುವ ಸೀನಿಯರ್ ಸರ್ಜ್ಜರವರ 3—11—08ನೆ ಮಕ್ಕಂ 2246ನೆ ಲೆಟರ್ ಓದಲಾಗಿ ಬೋರ್ಡಿನ ಈಗಿನ ಸ್ಥಿತಿಯಲ್ಲಿ ಹೊಸಕಟ್ಟಡ ಕಟ್ಟುತಕ್ಕ ಬಗ್ಗೆ ಚಂದಾಕೊಡಲು ಅವಕಾಶವಿಲ್ಲವಾಗಿಯೂ, ಸದರಿ ಆಸ್ಪತ್ರೆಯನ್ನು ಜೀರೆ ಕಟ್ಟಡಕ್ಕೆ ವರ್ಗಾಯಿಸತಕ್ಕ ವಿಚಾರದಲ್ಲಿ ತರೀಕೆರೆ ತಾಲ್ಲೂಕು ಬೋರ್ಡಿನವರ ಮತ್ತು ಸೀನಿಯರ್ ಸರ್ಜ್ಜರವರ ಅಭಿಪ್ರಾಯವನ್ನೆ ಅನುಮೋದಿಸುತ್ತೇವೆಂತಲೂ ಸಹ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

12. ಪ್ರೆಸಿಡೆಂಟರು ಮುಂಜಾಗ್ರತೆಯಿದ ಈ ಕೆಳಗೆ ನಮೂದಾಗುವ ಅಂದಾಜಾಗಳನ್ನು ಬೋರ್ಡಿನವರು ಒಪ್ಪುರುತ್ತಾರೆ.

(1) ಚಿಕ್ಕಮಗಳೂರು ತಾಲ್ಲೂಕು ಚಂದ್ರಕಟ್ಟೆ ರಿಪೇರಿ ಬಗ್ಗೆ ತಯಾರಾದ 495 ರೂಪಾಯಿನ ಅಂದಾಜು.

(2) ಭೂತನಹಳ್ಳಿಲಿ ಭಾವಿ ತೋಡಿಸತಕ್ಕ ಬಗ್ಗೆ ತಯಾರಾದ 35 ರೂಪಾಯಿನ ಅಂದಾಜು.

(3) ಕಡೂರು ತಾಲ್ಲೂಕು ಗಂಗನಹಳ್ಳಿ ಭಾವಿಗೆ ಕಲ್ಲುಕಟ್ಟುತಕ್ಕ ಬಗ್ಗೆ ತಯಾರಿಸಿದ 345 ರೂಪಾಯಿನ ಅಂದಾಜು.

13. ಮುಂದಿನ ಡಿಸ್ಟ್ರಿಕ್ಟ್ ಬೋರ್ಡಿನ ಮಿಟಿಂಗು 1909ನೆ ಮೇ ತಿಂಗಳು 22ನೆ ತಾರೀಖು ಶನಿವಾರ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ಪ್ರೆಸಿಡೆಂಟ್.

ನೋಟಸ್.

ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ.

ತಾರೀಖು 16—18ನೆ ಮಾರ್ಚ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜಿವಾರ್ ಡಿಟ್ಟುಂಬಿಟ್ಟು—ಕುಳವಾರು ಚಿಟ್ಟು ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮಕ್ಕಂ 14523-30—R. F. 157-93ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ನಮೂದಿರುವ ಮೇರೆಗೆ ಸರ್ವೆ ಆದ 12 ವರುಷಗಳ ಕಾಲ ಕಳೆದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ಟ್ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಂಬಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ್ ಫಾಯಿಷ್ ತಾರೀಖು ಲಾಗಾಯಿತು ಮೂರು ತಿಂಗಳ ವಳಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇರ್ಷ ಕೊಟ್ಟು ಕಾಪಿ ಪಡಕೊಳ್ಳಬಹುದು. ಈ ವಾಯಿದೆ ಕಳೆದ ಕೂಡ್ಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮಲ್ದಾರ್.